ಕುಡಿಯುವ ನೀರಿನ ಯೋಜನೆ

119 (188) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ; ಈ ಯೋಜನೆಗಳ ಅಂದಾಜು ವೆಚ್ಚವೆಷ್ಟು ;

ಆ) ಈ ಯೋಜನೆಗಳನ್ನು ಎಂದು ಪ್ರಾರಂಭಿಸಲಾಗಿದೆ; ಈ ಯೋಜನೆಗಳ ಅನುಷ್ಠಾನಕ್ಕಾಗಿ ಇಲ್ಲಿಯವರೆವಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ; (ಯೋಜನೆವಾರು ವಿವರಗಳನ್ನು ಒದಗಿಸುವುದು)

ಇ) ಈ ಯೋಜನೆಯನ್ನು ಪೂರ್ಣಗೊಳಿಸಲು ಸಮಯವನ್ನು ನಿಗದಿಪಡಿಸಿದೆಯೇ ;

ಈ) ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳು ಯಾವ ಕಾಲಮಿತಿಯೊಂದಿಗೆ ಪೂರ್ಣಗೊಳ್ಳಬೇಕಾಗಿತ್ತು ;

ಉ) ಹಾಲಿ ಎಷ್ಟು ಯೋಜನೆಗಳು ಪೂರ್ಣಗೊಂಡಿವೆ ಹಾಗೂ ಯಾವ ಯಾವ ಯೋಜನೆಗಳು ಮಂದಗತಿಯಲ್ಲಿ ಸಾಗುತ್ತಿವೆ ;

ಊ) ಈ ಯೋಜನೆಗಳನ್ನು ಆದಷ್ಟು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು ; ಈ ಯೋಜನೆಗಳು ಪೂರ್ಣಗೊಂಡ ನಂತರ ಎಷ್ಟು ಜನರಿಗೆ ಇದರ ಲಾಭ ದೊರೆಯಲಿದೆ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಬೀದರ ಜಿಲ್ಲೆಯ, ಹುಮನಾಬಾದ-ಚಿಟಗುಪ್ಪ ಪಟ್ಟಣಗಳು, ಭಾಲ್ಕಿ ಪಟ್ಟಣ ಮತ್ತು ಔರಾದ ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ.

1. **ಹುಮನಾಬಾದ–ಚಿಟಗುಪ್ಪ:**

ಹುಮನಾಬಾದ–ಚಿಟಗುಪ್ಪ ಪಟ್ಟಣ ಹಾಗೂ ಮಾರ್ಗ ಮಧ್ಯ 10 ಹಳ್ಳಿಗಳ ಸಂಯುಕ್ತ ನೀರು ಸರಬರಾಜು ಯೋಜನೆ ಅಂದಾಜು ವೆಚ್ಚ ರೂ. 1904.00 ಲಕ್ಷಗಳಲ್ಲಿ ಕೈಗೆತ್ತಿಕೊಂಡು ಕ್ರಮವಾಗಿ 24.11.2008 ಮತ್ತು 31.03.2009ರಂದು ಚಾಲನೆಗೊಳಿಸಲಾಗಿದೆ.

2. **ಭಾಲ್ಕಿ:**

ಭಾಲ್ಕಿ ಪಟ್ಟಣಕ್ಕೆ ವಿತರಣಾ ಜಾಲ ಒದಗಿಸುವ ಯೋಜನೆ ಅಂದಾಜು ವೆಚ್ಚ ರೂ. 540.00 ಲಕ್ಷಗಳಲ್ಲಿ ಕೈಗೆತ್ತಿಕೊಂಡು ಜೂನ್ 2011ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಿದೆ.

3. **ಔರಾದ:**

ಔರಾದ ಪಟ್ಟಣ ಹಾಗೂ ಮಾರ್ಗ ಮಧ್ಯದ ಆರು ಹಳ್ಳಿಗಳಿಗೆ ಮಾಂಜರಾ ನದಿ ಹಾಲಳ್ಳಿ ಬ್ಯಾರೇಜ ಮೂಲದಿಂದ ಸಂಯುಕ್ತ ಕುಡಿಯುವ ನೀರು ಸರಬರಾಜು ಯೋಜನೆ ಅಂದಾಜು ವೆಚ್ಚ ರೂ. 3150.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮಂಡಳಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) 1. **ಹುಮನಾಬಾದ–ಚಿಟಗುಪ್ಪ:** ಆಗಸ್ಟ್ 2005ರಂದು ಯೋಜನೆ ಪ್ರಾರಂಭಿಸಿ ಇಲ್ಲಿಯವರೆಗೆ ರೂ. 2670.25 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

2. **ಭಾಲ್ಕಿ:** ಆಗಸ್ಟ್ 2009ರಂದು ಯೋಜನೆ ಪ್ರಾರಂಭಿಸಿ ಇಲ್ಲಿಯವರೆಗೆ ರೂ. 325.41 ಲಕ್ಷಗಳು ಖರ್ಚು ಮಾಡಿವೆ.

3. **ಔರಾದ:** ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಪ್ರಕ್ರಿಯೆಯನ್ನು ಮಂಡಳಿಯಿಂದ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) 1. **ಹುಮನಾಬಾದ–ಚಿಟಗುಪ್ಪ:** ಚಾಲನೆಗೊಳಿಸಲಾಗಿದೆ.

2. **ಭಾಲ್ಕಿ: ಭಾಲ್ಕಿ** ಪಟ್ಟಣಕ್ಕೆ ವಿತರಣಾ ಜಾಲ ಒದಗಿಸುವ ಯೋಜನೆಯನ್ನು ಜೂನ್ 2011ಕ್ಕೆ ಪೂರ್ಣಗೊಳಿಸಲು ಮಂಡಳಿ ಉದ್ದೇಶಿಸಿದೆ.

3. **ಔರಾದ:** ಈ ಯೋಜನೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮಂಡಳಿಯು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) 1. **ಹುಮನಾಬಾದ-ಚಿಟಗುಪ್ಪ:** ಫೆಬ್ರವರಿ 2007ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು.

2. **ಭಾಲ್ಕಿ:** ಭಾಲ್ಕಿ ಪಟ್ಟಣಕ್ಕೆ ವಿತರಣಾ ಜಾಲ ಒದಗಿಸುವ ಯೋಜನೆಯು ಆಗಸ್ಟ್ 2010ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು.

3. **ಔರಾದ:** ಈ ಯೋಜನೆಯ ಕಾಮಗಾರಿಗಳನ್ನು ಮುಂದಿನ 3 ವರ್ಷಗಳಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ.

ಉ) 1. **ಹುಮನಾಬಾದ-ಚಿಟಗುಪ್ಪ:** ಹಾಗೂ ಮಾರ್ಗ ಮಧ್ಯ ಬರುವ 10 ಹಳ್ಳಿಗಳ ಸಂಯುಕ್ತ ನೀರು ಸರಬರಾಜು ಯೋಜನೆ ಪೂರ್ಣಗೊಂಡಿದೆ.

2. **ಭಾಲ್ಕಿ:** ಪಟ್ಟಣಕ್ಕೆ ವಿತರಣಾ ಜಾಲ ಒದಗಿಸುವ ಯೋಜನೆ ಮಂದಗತಿಯಲ್ಲಿ ಸಾಗುತ್ತಿದೆ.

3. **ಔರಾದ:** ಹಾಗೂ ಮಾರ್ಗ ಮಧ್ಯದ ಆರು ಹಳ್ಳಿಗಳಿಗೆ ಮಾಂಜರಾ ನದಿ ಹಾಲಳ್ಳಿ ಬ್ಯಾರೇಜ ಮೂಲದಿಂದ ಸಂಯುಕ್ತ ಕುಡಿಯುವ ನೀರು ಸರಬರಾಜು ಯೋಜನೆಯ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಬೇಕಾಗಿದೆ.

ಊ) 1. **ಹುಮನಾಬಾದ-ಚಿಟಗುಪ್ಪ:** ಹಾಗೂ ಮಾರ್ಗ ಮಧ್ಯ ಬರುವ 10 ಹಳ್ಳಿಗಳ ಸಂಯುಕ್ತ ನೀರು ಸರಬರಾಜು ಯೋಜನೆಯನ್ನು ಚಾಲನೆಗೊಳಿಸಲಾಗಿದೆ. ಈ ಯೋಜನೆಯಿಂದ ಹುಮನಾಬಾದ ಪಟ್ಟಣದ 76000 ಜನರು ಚಿಟಗುಪ್ಪ ಪಟ್ಟಣದ 68000 ಜನರು ಇದರ ಲಾಭ ಪಡೆಯುತ್ತಿದ್ದಾರೆ ಅಲ್ಲದೆ ಮಾರ್ಗ ಮಧ್ಯದ ಹತ್ತು ಹಳ್ಳಿಗಳ 73789 ಜನರು ಇದರ ಲಾಭ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಹಳ್ಳಿಗಳಿಗೆ ನೀರು ಒದಗಿಸುವ ಯೋಜನೆಯನ್ನು ಆರ್.ಡಿ.ಪಿ.ಆರ್. ಇಲಾಖೆಯ ವತಿಯಿಂದ ಕೈಗೊಳ್ಳಬೇಕಾಗಿದೆ.

2. **ಭಾಲ್ಕಿ:** ಪಟ್ಟಣಕ್ಕೆ ವಿತರಣಾ ಜಾಲ ಒದಗಿಸುವ ಯೋಜನೆಯನ್ನು ಜೂನ್ 2011ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಯೋಜನೆ ಪೂರ್ಣಗೊಂಡ ನಂತರ 60000 ಜನರು ಇದರ ಲಾಭ ಪಡೆಯಲಿದ್ದಾರೆ.

3. ಔರಾದ: ಯೋಜನೆ ಪೂರ್ಣಗೊಂಡ ನಂತರ ಔರಾದ ಪಟ್ಟಣದ 36555 ಜನರು ಹಾಗೂ ಮಾರ್ಗ ಮಧ್ಯದ ಆರು ಹಳ್ಳಿಗಳ 28655 ಜನರು ಒಟ್ಟು 65210 ಜನರು ಲಾಭ ಪಡೆಯಲಿದ್ದಾರೆ.

ಮಂಜೂರಾದ ಕೇಂದ್ರ ಸರ್ಕಾರದ ಅನುದಾನ

121 (400) ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾದ ಕೇಂದ್ರ ಸರ್ಕಾರದ ಅನುದಾನದ ಮೊತ್ತವೆಷ್ಟು; ಅದನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆಯೇ

ಆ) ಈ ಸಂಸ್ಥೆಗಳ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳೇನು ; (ವಿವರ ನೀಡುವುದು)

ಇ) ಈ ಪ್ರದೇಶಗಳಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಇಲಾಖೆಯು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾದ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತೆ ಇದೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ.	ವರ್ಷ	ಬಿಡುಗಡೆಯಾದ ಮೊತ್ತ
1	2009–10	442.18
2.	2010–11 (ಈವರೆವಿಗೂ)	380–29

ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಆಯಾ ಯೋಜನೆಗಳ ಕಾಲಮಿತಿಯೊಳಗೆ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.